**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5036/2025**

**ಪ್ರಾ.ಸಾಃ 5**

ಸಾಕ್ಷಿಯನ್ನು ದಿಃ 01.06.2026 ರಂದು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನಾನು ಹಸು ಮತ್ತು ಕುರಿಗಳನ್ನು ಮೇಯಿಸುತ್ತೇನೆ. ಸುಮಾರು 1 ವರ್ಷದ ಹಿಂದೆ ಸಂಜೆ 5.30 ಗಂಟೆ ಸಮಯದಲ್ಲಿ ಹೊನ್ನುಹೊಳೆ ದಡದಲ್ಲಿ ನಾನು ಹಸುಗಳನ್ನು ಮೇಯಿಸುತ್ತಿದ್ದಾಗ ಅಲ್ಲಿ ಒಂದು ನಾಯಿ ಬಂದು ಮಣ್ಣನ್ನು ಕೆದಕುತ್ತಿತ್ತು. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಮನುಷ್ಯನ ಕೈ ಕಾಣಿಸಿತು. ನಾನು ತಕ್ಷಣ ಪೊ.ಠಾಣೆಗೆ ಮಾಹಿತಿ ತಿಳಿಸಿದೆ. ಪಿರ್ಯಾದಿಯನ್ನು ನಿಪಿ 16 ಎಂದು, ಸಾಕ್ಷಿ ಸಹಿಯನ್ನು ನಿಪಿ 16(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ವಾಮಾಚಾರ ಮಾಡಿದ ಗುರುತು ಕಂಡು ಬಂತು. ನಂತರ ಪೋಲೀಸರು ಸದರಿ ಸ್ಥಳದಲ್ಲಿ ಮೃತ ದೇಹವನ್ನು ತೆಗೆಯುತ್ತಿದ್ದಾರೆ ಎಂಬ ವಿಚಾರ ಗೊತ್ತಾಗಿ ನಾನು ಸ್ಥಳಕ್ಕೆ ಹೋದೆ. ಪೋಲೀಸರು ರಾತ್ರಿ 12.00-1.00 ಗಂಟೆವರೆಗೆ ಮೃತದೇಹವನ್ನು ತೆಗೆದು ಸ್ಥಳದಲ್ಲಿ ಮಹಜರ್ ಬರೆದರು. ಮಹಜರ್ ಅನ್ನು ನಿಪಿ 17 ಎಂದು ಸಾಕ್ಷಿ ಸಹಿಯನ್ನು ನಿಪಿ 17(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಶವ ಒಬ್ಬ ಮಹಿಳೆಯ ಶವವಾಗಿತ್ತು. ಪೋಲೀಸರು ಮೃತ ದೇಹದ ಮೇಲಿದ್ದ ಯಾವ ಯಾವ ವಸ್ತುಗಳನ್ನು ವಶಪಡಿಸಿಕೊಂಡರು ಎಂದು ನನಗೆ ಈಗ ಹೇಳಲಾಗುತ್ತಿಲ್ಲ. ಸಾಕ್ಷಿ ಭಾವಚಿತ್ರಗಳನ್ನು ನೋಡಿ ಮಹಜರ್ ಸಮಯದಲ್ಲಿ ಚಾಸಾ 8 ಮತ್ತು 9 ರವರು ಇದ್ದರು ಎಂದು ಹೇಳುತ್ತಾರೆ. ಭಾವಚಿತ್ರಗಳನ್ನು ನಿಪಿ 18 ರಿಂದ 24 ಎಂದು ಗುರುತಿಸಲಾಯಿತು. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೇಳಿದ್ದಾರೆ, ಅನುಮತಿ ನೀಡಿದೆ)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಪೋಲೀಸರು ಮೃತದೇಹದಿಂದ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ರಬ್ಬರ್, ಚಿನ್ನದ ಒಂದು ಬಳೆ, ಬೆಳ್ಳಿಯ 2 ಕಾಲು ಚೈನು, 4 ಕಾಲುಂಗುರಗಳು, 2 ಓಲೆ, 2 ಜುಮುಗಿ, 2 ಕೆನೆಸರ, 1 ತಾಯಿತ, ಸ್ಥಳದಿಂದ ಮಾದರಿ ಮಣ್ಣನ್ನು ಅಮಾನತ್ತುಪಡಿಸಿಕೊಂಡರು ಎಂದರೆ ನಾನು ನೋಡಿರುವುದಿಲ್ಲ ಎಂದು ಹೇಳಿರುತ್ತಾರೆ. ನಾನು ಪೋಲಿಸರಿಗೆ ನಿಪಿ 25 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲೇ ಮೇಲೆ ಹೇಳಿದ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡರು, ನಾನು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಬರೆದ ದಿನಾಂಕ 19.06.2025 ಎಂದರೆ ಸರಿ.

**ಪಾಟೀ ಸವಾಲುಃ- ಶ್ರೀ ವಕೀಲರಿಂದ**

ಕಾಲಾವಕಾಶ ಕೋರಿರುತ್ತಾರೆ. ಯಾವುದೇ ಸಕಾರಣ ಇರುವುದಿಲ್ಲ. ಕಾಲಾವಕಾಶ ನೀರಾಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ